ಅಷ್ಟಾವರಣ, ಪಂಚಾಚಾರ ಹಾಗೂ ಷಟ್‌ಸ್ಥಲಗಳ ವಿಚಾರಗಳು ಸವಿಸ್ತಾರವಾಗಿ ಇಲ್ಲಿ ನಿರೂಪಿತವಾಗಿರುವುದರಿಂದ ಈ ಗ್ರಂಥವು ವೀರಶೈವರಿಗೆ ಸರ್ವಸ್ವವಾಗಿರುತ್ತದೆ.

ಈ ಗ್ರಂಥವು ಧಾರ್ಮಿಕ ಆಚಾರ–ವಿಚಾರಗಳನ್ನು ಬೋಧಿಸುವುದರ ಜೊತೆಗೆ ಅತಿ ಮಹತ್ತ್ವಪೂರ್ಣವಾದ ಸಮಾಜಶಾಸ್ತ್ರವನ್ನೂ ಸಹ ಉಪದೇಶಿಸುತ್ತದೆ. ಈ ಗ್ರಂಥದ ಒಂಬತ್ತನೆಯ ಪರಿಚ್ಛೇದದಲ್ಲಿ ಬರುವ ಭಕ್ತಿಮಾರ್ಗಕ್ರಿಯಾಸ್ಥಲದಲ್ಲಿ ವೀರಶೈವ ಧರ್ಮೋಚಿತವಾದ ಆಚಾರ–ವಿಚಾರ ಮತ್ತು ಸಮಾಜಶಾಸ್ತ್ರವು ವಿಶೇಷವಾಗಿ ಉಲ್ಲೇಖಿತವಾಗಿದೆ. ಆದ್ದರಿಂದ ಜಿಜ್ಞಾಸುಗಳು ಆ ಭಾಗವನ್ನು ಅವಶ್ಯವಾಗಿ ಅವಲೋಕಿಸಬೇಕು.

ಹೀಗೆ ವೀರಶೈವ ಧರ್ಮ, ದರ್ಶನಗಳ ಸರ್ವಾಂಗೀಣ ವಿಚಾರಗಳು ಶ್ರೀ ಸಿದ್ಧಾಂತ ಶಿಖಾಮಣಿಯಲ್ಲಿ ಪ್ರತಿಪಾದಿಸಲ್ಪಟ್ಟಿರುವುದರಿಂದ, ಹಲವು ಹನ್ನೆರಡು ಗ್ರಂಥಗಳನ್ನೋದುವುದಕ್ಕಿಂತ ಇದೊಂದು ಗ್ರಂಥವನ್ನು ಮಾತ್ರ ಚೆನ್ನಾಗಿ ಅಭ್ಯಸಿಸಿ ಮನನ ಮಾಡಿಕೊಂಡು, ಇಲ್ಲಿ ಹೇಳಿರುವ ಆಚಾರಸಂಹಿತೆಯನ್ನು ಆಚರಣೆಯಲ್ಲಿ ತಂದಿದ್ದೇ ಆದರೆ, ಅಂಥವನು ಇದೇ ಜನ್ಮದಲ್ಲಿ ಲಿಂಗಾಂಗಸಾಮರಸ್ಯವನ್ನು ಪಡೆದು, **"ಏಕೇನ ಜನ್ಮನಾ ಮುಕ್ತಿಃ"** (ಒಂದೇ ಜನ್ಮದಲ್ಲಿ ಮುಕ್ತಿ) ಎಂಬ ಆಗಮೋಕ್ತಿಯನ್ನು ಸಾರ್ಥಕಪಡಿಸಿಕೊಂಡಂತಾಗುತ್ತದೆ.

ಶ್ರೀ ಸಿದ್ಧಾಂತ ಶಿಖಾಮಣಿಯ ವಿಷಯವು ತತ್ತ್ವಜ್ಞಾನಪ್ರಧಾನವಾದದ್ದಾಗಿದ್ದರೂ, ಗ್ರಂಥದಲ್ಲಿ ಪ್ರಸಂಗಾನುಸಾರವಾಗಿ ಶಾಂತ, ಭಕ್ತಿ, ಶೃಂಗಾರ, ಅದ್ಭುತ, ವೀರ, ಬೀಭತ್ಸ ಮುಂತಾದ ರಸಗಳನ್ನು ಕಾವ್ಯದಲ್ಲಿ ಬಳಸುವಲ್ಲಿ ಕವಿಗೆ ಯಶಸ್ಸು ಪ್ರಾಪ್ತವಾಗಿದೆ. ಈ ಗ್ರಂಥದಲ್ಲಿ ಅದೆಲ್ಲಿಯೂ ಕ್ಲಿಷ್ಟತೆ, ಕರ್ಣ ಕಠೋರತೆ, ದೂರಾನ್ವಯ, ದುರ್ಬೋಧತೆ, ಸಂದಿಗ್ಧತೆ ಮುಂತಾದ ದೋಷಗಳೊಂದೂ ಕಂಡುಬರುವುದಿಲ್ಲ. ಒಟ್ಟಿನಲ್ಲಿ ಶ್ರೀ ಶಿವಯೋಗಿ ಶಿವಾಚಾರ್ಯರ ಶ್ರೇಷ್ಠ ಕೃತಿಯಾದ ಶ್ರೀ ಸಿದ್ಧಾಂತ ಶಿಖಾಮಣಿಯು ವೀರಶೈವ ತತ್ತ್ವಜ್ಞಾನವನ್ನು ಸಕ್ರಮವಾಗಿ ಹಾಗೂ ಅತಿ ಸುಂದರ ಶೈಲಿಯಲ್ಲಿ ಪ್ರತಿಪಾದಿಸುವ, ಸಾಹಿತ್ಯಕ ಸೌಂದರ್ಯದಿಂದೊಡಗೂಡಿದ ಒಂದು ಶ್ರೇಷ್ಠ ಕಾವ್ಯವೆಂಬುದಾಗಿ ಹೇಳಬಹುದಾಗಿದೆ.

(**ಆಧಾರ:** *ಶ್ರೀ ಸಿದ್ಧಾಂತ ಶಿಖಾಮಣಿ ಪ್ರವಚನಪ್ರಭೆ, ಸಂಪುಟ – ೧*)

## ಶ್ರೀರಾಮಕೃಷ್ಣ ಸಂಭಾಷಣ ಸುಧೆ

**ಮಾಸ್ಟರ್:** **"ಭಗವಂತನ ದರ್ಶನ ಮಾಡಲಾಗುವುದೆ?"**

**ಶ್ರೀರಾಮಕೃಷ್ಣರು:** "ಹೌದು, ನಿಸ್ಸಂದೇಹವಾಗಿ. ಆಗಾಗ ಏಕಾಂತವಾಸ, ಆತನ ನಾಮ ಗುಣಕೀರ್ತನೆ, ವಸ್ತುವಿಚಾರ – ಈ ಸಾಧನೆಗಳನ್ನೆಲ್ಲಾ ಅವಲಂಬಿಸಬೇಕಾಗುತ್ತದೆ."

**ಮಾಸ್ಟರ್:** "ಯಾವ ಮಾನಸಿಕ ಅವಸ್ಥೆಯಲ್ಲಿ ಆತನ ದರ್ಶನ ದೊರೆಯುತ್ತದೆ?"

ಶ್ರೀರಾಮಕೃಷ್ಣರು: "ಅತ್ಯಂತ ವ್ಯಾಕುಲನಾಗಿ ಅತ್ತರೆ ಆತನ ದರ್ಶನ ಪಡೆಯಲು ಸಾಧ್ಯ. ಹೆಂಡತಿ ಮಕ್ಕಳಿಗಾಗಿ ಜನ ಬಿಂದಿಗೆ ತುಂಬ ಕಣ್ಣೀರು ಸುರಿಸುತ್ತಾರೆ; ಕಣ್ಣೀರ ಸಾಗರದಲ್ಲೇ ತೇಲಾಡಿಬಿಡುತ್ತಾರೆ ಹಣಕ್ಕಾಗಿ. ಆದರೆ ಭಗವಂತ ಬೇಕೆಂದು ಯಾರು ತಾನೆ ಕಣ್ಣೀರಿಡುತ್ತಾರೆ? ಸಹಜ ಕರೆಯಿಂದ ಆತನನ್ನು ಕರೆಯಬೇಕು."

ಪರಮಹಂಸರು ಹಾಡಲಾರಂಭಿಸಿದ್ದಾರೆ:

**ನಂಬಿ ಕರೆದರೆ ತಾಯಿ ಓ ಎನ್ನದಿಹಳೇನೋ**
**ನಿನ್ನ ತೊರೆದವಳೆಂತು ಇರಬಲ್ಲಳೋ**
**ಬಿಲ್ವದಳ ಹೂವುಗಳ ತಂದು ಪಾದಕೆ ಮುಡಿಸೊ**
**ನಿನ್ನ ಭಕ್ತಿಯ ದಿವ್ಯಗಂಧದೊಡನೆ!**

ಮತ್ತೆ ಪರಮಹಂಸರು ಹೇಳುತ್ತಿದ್ದಾರೆ: "ವ್ಯಾಕುಲತೆ ಆದ ನಂತರವೇ ಭಗವಂತನ ದರ್ಶನ. ಈ ಮೂರೂ ಪ್ರೀತಿಗಳೂ ಒಟ್ಟಿಗೆ ಉಂಟಾಗುವುದಾದರೆ ಭಗವಂತ ಗೋಚರವಾಗಿಬಿಡುತ್ತಾನೆ – ವಿಷಯಿಗೆ ವಿಷಯಗಳ ಮೇಲಿರುವ ಪ್ರೀತಿ, ತಾಯಿಗೆ ಮಕ್ಕಳ ಮೇಲಿರುವ ಪ್ರೀತಿ, ಸತಿಗೆ ಪತಿಯ ಮೇಲಿರುವ ಪ್ರೀತಿ. ಈ ಮೂರೂ ಪ್ರೀತಿಗಳೂ ಯಾರದ್ದೇ ಆಗಲಿ ಒಟ್ಟಿಗೆ ಮೂಡುವುದಾದರೆ, ಅವುಗಳ ಜೋರಿನಿಂದ ಆತನಿಗೆ ಭಗವಂತನ ಸಾಕ್ಷಾತ್ಕಾರ ಸಾಧ್ಯವಾಗುತ್ತದೆ." ( **ಸಂಗ್ರಹ:** *ಕುಮಾರಿ ಸ್ವರ್ಣಗೌರಿ* )

# ಭಕ್ತಿಭಂಡಾರಿ ಬಸವಣ್ಣ

ಡಾ. ಸಿ.ಪಿ. ಕೃಷ್ಣಕುಮಾರ್

**ಹ**ನ್ನೆರಡನೆಯ ಶತಮಾನದ ಬಾಂದಳದಲ್ಲಿ ಶರಣಗಣವೊಂದು ನಕ್ಷತ್ರಮಂಡಲ; ಅದರಲ್ಲಿ ಧ್ರುವನಕ್ಷತ್ರವಾಗಿ ಪರಿಶೋಭಿಸುತ್ತಿದ್ದಾರೆ, ಬಸವಣ್ಣನವರು. ಮನುಕುಲದ ಇತಿಹಾಸದಲ್ಲಿ ಅವರಿಗೆ ಒಂದು ಅನನ್ಯ ಸ್ಥಾನವಿದೆ.



ಅವರದು ಸಮಗ್ರ ವ್ಯಕ್ತಿತ್ವ, ಅದರ ಮುಖ್ಯವಾದ ಆಯಾಮವೆಂದರೆ ಭಕ್ತಿ; ಅಕ್ಷರಶಃ ಅವರು 'ಭಕ್ತಿಭಂಡಾರಿ'. ಬಸವಣ್ಣನವರ ಬಗ್ಗೆ ಹರಿಹರನ ಉದ್ಗಾರವಿದು: "ಭವಪೂಜೆ ಒಲಿದು ಪುರುಷಾಕಾರವಾದಂತೆ." ಅವರು ಭಕ್ತರಲ್ಲದಿದ್ದರೆ, ಮತ್ತೇನೂ ಅಲ್ಲ ಎಂದರೆ ತಪ್ಪಾಗಲಾರದು. ಭಕ್ತಿಯೆ ಅವರ ಶಕ್ತಿಯ ಮೂಲ ಬಲ, ನೆಲೆ, ಸೆಲೆ ಮತ್ತು ಗಂಗೋತ್ರಿ. ಆದರೆ ಅವರದು ಮುಗ್ಧ, ಮೂಢ ಭಕ್ತಿಯಲ್ಲ; ವೈಚಾರಿಕ ಭಕ್ತಿ. ಅವರ ಪ್ರಖರ ವೈಜ್ಞಾನಿಕ ದೃಷ್ಟಿ ಬೆರಗುಗೊಳಿಸುವಂಥದು. ಅವರ ಮಹಾವೈಶಿಷ್ಟ್ಯವೆಂದರೆ ಭಕ್ತಿ, ಕ್ರಾಂತಿ – ಎರಡನ್ನೂ ಎರಡು ಕೈಗಳಲ್ಲೆಂಬಂತೆ ಒಟ್ಟೊಟ್ಟಿಗೇ ನಡೆಸಿದ್ದು. ಅವರ ದೈವೀ ಪ್ರಜ್ಞೆಯಂತೆ ಸಾಮಾಜಿಕ ಪ್ರಜ್ಞೆಯೂ ಅದ್ಭುತವಾದುದು, ಅನನ್ಯವಾದುದು.

ಬಸವಣ್ಣನವರ ಭಕ್ತಿಯಲ್ಲಿ ಶರಣಸತಿ, ಲಿಂಗಪತಿ ಅರ್ಥಾತ್ ಮಧುರಭಾವ ಕೂಡ ಮಿಳಿತವಾಗಿದೆ. ಅವರು, "ಸತಿಯಾನು, ಪತಿ ನೀನಯ್ಯ" ಎಂದು ಭಗವಂತನಿಗೆ ಹೇಳುತ್ತಾರೆ ("ತಂದೆ ನೀನು, ತಾಯಿ ನೀನು, ಬಂಧು ನೀನು, ಬಳಗ ನೀನು" ಎಂದು ಕೂಡ).

ಭಕ್ತಿಗೆ ಅವರು ಕೊಡುವ ಪ್ರಾಧಾನ್ಯ, "ವೇದಪ್ರಿಯನೂ ಅಲ್ಲ, ನಾದಪ್ರಿಯನೂ ಅಲ್ಲ, ಭಕ್ತಿಪ್ರಿಯ ನಮ್ಮ ಕೂಡಲಸಂಗಮದೇವ" ಎಂಬ ಉಕ್ತಿಯಲ್ಲಿ ಉಜ್ವಲವಾಗಿ ಅಭಿವ್ಯಕ್ತವಾಗಿದೆ. "ಭಕ್ತಿಕಂಪಿತ ನಮ್ಮ ಕೂಡಲಸಂಗಮ ದೇವ!" ಎಂದೂ ಅವರು ನುಡಿಯುತ್ತಾರೆ (ಎಂದರೆ ಭಕ್ತಿಯಲ್ಲಿ ಕ್ಲೈಬ್ಯವಿಲ್ಲ, ವೀರ್ಯವಿದೆ ಎಂದರ್ಥ). ಭಕ್ತಿಯ ಪ್ರಾಮುಖ್ಯ ಮತ್ತು ಅನಿವಾರ್ಯತೆ ಈ ಕೆಳಗಿನ ವಚನದಲ್ಲಿಯೂ ಸುಪ್ರಕಟವಾಗಿದೆ:

**ಗೀತವ ಹಾಡಿದೊಡೇನು? ಶಾಸ್ತ್ರಪುರಾಣವ ಕೇಳಿದೊಡೇನು?**
**ವೇದ ವೇದಾಂತವನೋದಿದರೇನು? ಭಕ್ತಿಯಿಲ್ಲದವರನೊಲ್ಲ, ಕೂಡಲಸಂಗಮದೇವ!**

ಬಸವಣ್ಣನವರ ಬದುಕಿನಲ್ಲಿ ಭಕ್ತಿ ಹಾಸುಹೊಕ್ಕಾಗಿದೆ. ಈ ವಚನ ಗಮನಾರ್ಹವಾದುದು:

**ಪರಚಿಂತೆ ನಮಗೇಕಯ್ಯ, ನಮ್ಮ ಚಿಂತೆ ನಮಗೆ ಸಾಲದೆ?**
**ಕೂಡಲಸಂಗಯ್ಯ ಒಲಿದಾನೋ ಒಲಿಯನೋ ಎಂಬ ಚಿಂತೆ**
**ಹಾಸಲುಂಟು, ಹೊದೆಯಲುಂಟು.**

ಇದು ವಾಸ್ತವವಾಗಿ ಚಿಂತೆಯಲ್ಲ, ಚಿಂತನ. ಚಿಂತೆಯೆಂದರೂ, ಚಿಂತಾಮಣಿ!

ಕರ್ನಾಟಕದ ಆಧ್ಯಾತ್ಮಿಕ ರಂಗದಲ್ಲಿ ಬಸವಣ್ಣನವರೊಂದು ಮೇರುಶಿಖರ. ಭಕ್ತಿಭಾವವೇ ಮೂರ್ತರೂಪು ತಳೆದ ಈ ಮಹಾನ್‌ಚೇತನದ ವ್ಯಕ್ತಿತ್ವದ ಹಲವು ಆಯಾಮಗಳನ್ನು ಇಲ್ಲಿ ನೋಡಬಹುದು. ಇದರ ಲೇಖಕರು ಕನ್ನಡದ ಪ್ರಸಿದ್ಧ ಬರಹಗಾರರು, ಮೈಸೂರು ಶ್ರೀರಾಮಕೃಷ್ಣ ಆಶ್ರಮದ ಭಕ್ತರು.